ಉಪ್ಪು ಜಾಸ್ತಿಯಾಗಿದ್ದರೆ ಗುರುತಿಸುತ್ತಿದ್ದರು; ಯಾವ ತುಪ್ಪ, ಎಣ್ಣೆ ಬಳಸಿದ್ದಾರೆ ಎಂಬುದನ್ನು ಹೇಳಿಬಿಡುತ್ತಿದ್ದರು. ಬಣ್ಣ ಬಣ್ಣದ ವಿವಿಧ ಆಕಾರದ ತಿಂಡಿಗಳು ಅವರನ್ನು ಆಕರ್ಷಿಸುತ್ತಿದ್ದವು. ಅವುಗಳನ್ನು ಹೊರಗಿನಿಂದ ನೋಡುವುದು, ಕೊಳ್ಳುವುದು, ಇಷ್ಟವಾದರೆ ತಿನ್ನುವುದು, ಇಲ್ಲವಾದರೆ ಎಲ್ಲಾ ದಂಡವಾಗುತ್ತಿತ್ತು.

'ಚಿತ್ರಕೂಟ' ತೋಟದಲ್ಲಿ ಒಂದೆರಡು ದಿನಗಳನ್ನು ಕಳೆದ ಮೇಲೆ ತೇಜಸ್ವಿಯವರ ಜೀಪಿನಲ್ಲಿ ನಾವೆಲ್ಲ ಶಿವಮೊಗ್ಗೆ ಕಡೆ ಹೊರಟರೆ ತಲುಪುತ್ತಿದ್ದುದು ಯಾವಾಗಲೋ! ಬಾಬಾ ಬುಡನ್‌ಗಿರಿಯ ಚೇತೋಹಾರಿ ಬೆಟ್ಟಗಳನ್ನು ಹಾದು ಹೋಗುತ್ತಿರುವಾಗ ಬೆಟ್ಟದ ಮೇಲೆ ತೇಲುತ್ತಿರುವ ಮೋಡಗಳನ್ನು ನೋಡಿ ಒಬ್ಬರು, 'ಓಡುತ್ತಿರುವ ಮೋಡಗಳೆ ನಾಲ್ಕು ಹನಿಗಳ ಚೆಲ್ಲಿ' ಎಂದು ಹಾಡಿದರೆ, ರಾಮದಾಸ್, 'ನಾವೂ ನಾಲ್ಕು ಹನಿ ಚೆಲ್ಲಬೇಕು, ಜೀಪ್ ನಿಲ್ಲಿಸ್ರಪ್ಪಾ...' ಎಂದು ಕೂಗಿ ನಗುವಿನ ಅಲೆಯನ್ನು ಎಬ್ಬಿಸುತ್ತಿದ್ದರು. ಹೊನ್ನಮ್ಮನ ಹಳ್ಳ ಎಂಬ ಸುಂದರ ತಾಣದಲ್ಲಿ ಮನೆಯಿಂದ ರಾಜೇಶ್ವರಿಯವರು ತಯಾರಿಸಿ ತಂದಿರುತ್ತಿದ್ದ ರುಚಿಕರವಾದ ಊಟವನ್ನು ಸವಿದು, ಸುಂದರೇಶ್ ಮನೆ ತಲುಪುವಷ್ಟರಲ್ಲಿ ಸಂಜೆಯಾಗಿರುತ್ತಿತ್ತು.

ಇಂದು ಫೋಟೊಗ್ರಫಿ ಎಲ್ಲರನ್ನು ತನ್ನತ್ತ ಸೆಳೆದಿರುವ ದಿನಗಳಲ್ಲಿ ನಾನು ಮತ್ತೊಮ್ಮೆ ನೆನಪಿನ ದಾರಿಯಲ್ಲಿ ಹಿಂದಕ್ಕೆ ಸರಿದು, ಹಲವು ಹವ್ಯಾಸಗಳ ಹವ್ಯಾಸಿ ತೇಜಸ್ವಿಯವರ ಫೋಟೊಗ್ರಫಿಯ ಬಗ್ಗೆ ಹೇಳಬೇಕು. ಛಾಯಾಚಿತ್ರ ಕಲೆ, ಸ್ಕೂಟರ್ ರಿಪೇರಿ, ಅಡುಗೆ ಯಾವುದೇ ಆಗಲಿ ಅದನ್ನು ಬುಡಮಟ್ಟ ಶೋಧಿಸಿ ತಿಳಿದುಕೊಳ್ಳುವ ತಾಳ್ಮೆ, ಪರಿಶ್ರಮ ಅವರಲ್ಲಿತ್ತು. ಒಮ್ಮೆ ನಮ್ಮ ಮನೆಯ ವರಾಂಡದಲ್ಲಿದ್ದ ಒಂದು ಹೂವಿನ ಕುಂಡದಲ್ಲಿ ದರ್ಜಿ ಹಕ್ಕಿ(ಟೈಲರ್ ಬರ್ಡ್)ಯೊಂದು ಎಲೆಗಳನ್ನು ಹೆಣೆದು, ಗೂಡುಕಟ್ಟಿ ಮರಿ ಮಾಡಿತ್ತು. ಇದು ತೇಜಸ್ವಿಯವರ ಸೂಕ್ಷ್ಮ ಕಣ್ಣಿಗೆ ಬಿದ್ದು, ಮನೆ ಒಳಗೆ ಕೆಳಮಟ್ಟದಲ್ಲಿದ್ದ ಕಿಟಕಿ ಪಕ್ಕ ಕುಳಿತು, ಮಲಗಿ ಆ ಹಕ್ಕಿಯ ಮರಿಗಳ ಚಿತ್ರವನ್ನು ಯಶಸ್ವಿಯಾಗಿ ತೆಗೆದರು. ಮುಂದೆ ಆ ಚಿತ್ರ ಒಂದು ಪ್ರದರ್ಶನದಲ್ಲಿ ಪ್ರದರ್ಶಿತವಾಯಿತು. ಪ್ರಾರಂಭಿಕ ದಿನಗಳಲ್ಲಿ ಅವರ ಛಾಯಾಗ್ರಹಣ ಪ್ರಯೋಗಗಳಿಗೆ ಹಕ್ಕಿ, ಕಾಡು, ನದಿ ಮುಂತಾದವುಗಳಲ್ಲದೆ ನಾವು ಸ್ನೇಹಿತರೂ ರೂಪದರ್ಶಿಗಳಾಗುತ್ತಿದ್ದೆವು. ಅಷ್ಟೆ ಅಲ್ಲ, ತಾವು ತೆಗೆದ ಫೋಟೋಗಳನ್ನು ತಾವೇ ಡೆವಲಪ್ ಮಾಡುವ ಪ್ರಯೋಗಶೀಲತೆ ಅವರಲ್ಲಿತ್ತು. ತೇಜಸ್ವಿಯವರ ಮನೆಯಲ್ಲಿ ಒಂದು ಚಿಕ್ಕ ರೂಮಿನಷ್ಟು ದೊಡ್ಡ ಕಕ್ಕಸು ಮನೆಯೇ ಅವರ ಡಾರ್ಕ್‌ರೂಮ್. ಇಲ್ಲಿ ನಮ್ಮನ್ನೆಲ್ಲ ಕೂಡಿಹಾಕಿಕೊಂಡು ಕಿಟಕಿ ಬಾಗಿಲು ಮುಚ್ಚಿ ಕೆಂಪುದೀಪ ಹಾಕುತ್ತಿದ್ದರು. ಫೋಟೊ ಎನ್‌ಲಾರ್ಜರ್‌ನಲ್ಲಿ ನೆಗೆಟಿವ್ ಇಟ್ಟು ಅದರ ಕೆಳಗೆ ಫೋಟೊ ಪೇಪರ್ ಇಟ್ಟು, ಎಕ್ಸ್‌ಪೋಸ್ ಮಾಡಿ, ತಕ್ಷಣ ಫೋಟೊ ಪೇಪರನ್ನು ತೆಗೆದು ಬ್ರೊಮೈಡ್ ದ್ರಾವಕದಲ್ಲಿ ಮುಳುಗಿಸಿ ಅಲ್ಲಾಡಿಸಿದಾಗ ಮಾಯಾಲೋಕದಿಂದ ನಮ್ಮ ಮುಖಗಳು ನಿಧಾನವಾಗಿ ಉದ್ಭವಿಸುತ್ತಿದ್ದವು. ಅವು ನಮಗೆ ಹಳೆಕಾಲದ ಸಿನಿಮಾಗಳಲ್ಲಿ ನೆನಪಿನಾಳದಿಂದ ಮೂಡಿ ಬರುವ ನಾಯಕಿಯರ ಮುಖಗಳಂತೆ ಆಶ್ಚರ್ಯ ಮೂಡಿಸುತ್ತಿದ್ದವು.

ನಾವೆಲ್ಲ ಚಿಕ್ಕವರಾಗಿದ್ದಾಗ ಮೈಸೂರು ನಿಜಕ್ಕೂ ಸಾಂಸ್ಕೃತಿಕ ನಗರಿಯಾಗಿತ್ತು. ಆಗ ಮೈಸೂರು ಆರ್.ಎಸ್. ನಾಯ್ಡು, ಶುದ್ಧೋದನ, ಎಸ್.ಎನ್. ಸ್ವಾಮಿ, ಪಿ.ಆರ್. ತಿಪ್ಪೇಸ್ವಾಮಿಯವರಂತಹ ಪ್ರಖ್ಯಾತ ಕಲಾವಿದರ ಸಂಗಮವಾಗಿತ್ತು. ತೇಜಸ್ವಿಯವರಲ್ಲಿ ಕಲೆಗಳ ಬೀಜಸ್ವರೂಪ ಅಮೂರ್ತವಾಗಿ ಇತ್ತೆಂದು ಕಾಣುತ್ತದೆ. ಹಾಗಾಗಿ ಎಸ್.ಎನ್. ಸ್ವಾಮಿಯವರ ಹತ್ತಿರ ತೇಜಸ್ವಿ ಚಿತ್ರಕಲೆ ಕಲಿಯಲು ಸೇರಿದರು. ಸ್ವಾಮಿಯವರದ್ದು ಪ್ರಥಮವಾಗಿ ಒಂದೇ ಪಾಠ, ಗೆರೆಗಳನ್ನು ಎಳೆಯುವುದು. ಪ್ರತಿದಿನ ಈ ಗೆರೆ ಎಳೆಯುವುದು ಬೇಜಾರಾಗಿ ಶಿಷ್ಯತ್ವ ಮುಗಿಯಿತು. ಆದರೆ, ಅವರಲ್ಲಿ ಅಂತರ್ಗತವಾಗಿದ್ದ ಕಲೆಯ ತುಡಿತ ಚಿಕ್ಕ ಚಿಕ್ಕ ಚಿತ್ರಗಳನ್ನು ರಚಿಸುವುದು, 'ಪುಸ್ತಕ ಪ್ರಕಾಶ'ನದ ಪುಸ್ತಕಗಳ ಮುಖಪುಟ